# <u>ಕಾರ್ಮಿಕ ನ್ಯಾಯಾಲಯ, ಮೈಸೂರು.</u>

**Ref**:06/2024

ಡಬ್ಲ್ಯೂ.ಡಬ್ಲ್ಯೂ- 1

**<u>ದಿನಾಂಕ 28.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು</u>**

**ಪಾಟೀ ಸವಾಲುಃ 2 ನೇ ಪಕ್ಷಗಾರರ ಪರ ಶ್ರೀ.ಜೆ.ಪಿ. ವಕೀಲರಿಂದಃ**

2 ನೇ ಪಕ್ಷಗಾರರ ಸಂಸ್ಥೆಯನ್ನು ಹಿಂದೆ Rungson's Electronics ಸಂಸ್ಥೆ ಎನ್ನುವ ಹೆಸರಿನಲ್ಲಿ ಕರೆಯುತ್ತಿದ್ದರು ಎಂದರೆ ಸರಿ. ತದನಂತರ ಸದರಿ Rungson's Electronics ಸಂಸ್ಥೆಯನ್ನು 2 ನೇ ಪಕ್ಷಗಾರರ ಸಂಸ್ಥೆಯವರು ಖರೀದಿ ಮಾಡಿದ್ದರು ಎಂದರೆ ಸರಿ. ನಾನು Diploma in Electronics and Communication ಶಿಕ್ಷಣವನ್ನು ಮಾಡಿರುತ್ತೇನೆ. ನಾನು Rungson's Electronics ಸಂಸ್ಥೆಗೆ 2006 ನೇ ಇಸವಿಯಲ್ಲಿ ಕೆಲಸಕ್ಕೆ ಸೇರಿದ್ದೆ ಎಂದರೆ ಸರಿ. ಇಲ್ಲಿ ಕೆಲಸಕ್ಕೆ ಸೇರುವುದಕ್ಕೆ ಮುಂಚೆ ಬೇರೆ ಯಾವುದೇ ಸಂಸ್ಥೆಗಳಲ್ಲಿ ಕೆಲಸ ಮಾಡಿದ ಅನುಭವ ನನಗೆ ಇರಲಿಲ್ಲ. Rungson's Electronics ಸಂಸ್ಥೆಯಲ್ಲಿ ನಾನು ಕೆಲಸ ಮಾಡುತ್ತಿದ್ದ ಅವಧಿಯಲ್ಲಿ ಕೆಲಸಗಾರರು ಹಾಗೂ ಆಡಳಿತ ವರ್ಗದವರ ಮಧ್ಯೆ ಯಾವುದೇ ವಿವಾದ ಇರಲಿಲ್ಲ. Rungson's Electronics ಸಂಸ್ಥೆಯನ್ನು 2 ನೇ ಪಕ್ಷಗಾರರ ಸಂಸ್ಥೆಯವರು ಖರೀದಿ ಮಾಡಿದಾಗ ಕೆಲಸಗಾರರ ಮನಸಿನಲ್ಲಿ ಅವರ ಭವಿಷ್ಯದ ಬಗ್ಗೆ ಭಯ ಉಂಟಾಗಿತ್ತು ಎಂದರೆ ಸರಿ. Rungson's Electronics ಸಂಸ್ಥೆಯವರು 2 ನೇ ಪಕ್ಷಗಾರರ ಸಂಸ್ಥೆಯವರ ಜೊತೆ ಒಂದೂಗೂಡಿ ಸಂಸ್ಥೆಯನ್ನು ಬೆಳೆಸಬೇಕು ಎಂದು ಇದ್ದೇವೆ ಆದ್ದರಿಂದ ನೀವು ಎಲ್ಲಾ ಒಟ್ಟಿಗೆ ಸೇರಿ ಯೂನಿಯನ್ ಮಾಡುವುದು ಬೇಡ, ಕೆಲಸಗಾರರ ಸಮಿತಿಯನ್ನು ರಚನೆ ಮಾಡಿಕೊಳ್ಳಿ ಎಂದು ನಮಗೆ ತಿಳಿಸಿದ್ದರು. ಸದರಿ ಸಮಿತಿಯಲ್ಲಿ ನಾನು ಒಬ್ಬ ಪದಾದಿಕಾರಿ ಆಗಿದ್ದೆ ಎಂದರೆ ಸರಿ.

ಕೆಲಸಗಾರರ ಸಂಬಳದಲ್ಲಿ 50 ರೂಗಳನ್ನು ಹಿಡಿದುಕೊಂಡು ನಮ್ಮ ಇಚ್ಚೆಯ ಪ್ರಕಾರ ಸದರಿ ಸಮಿತಿಗೆ ಕೊಡುತ್ತಿದ್ದರು ಎಂದರೆ ಸರಿ. ಸದರಿ ಸಮಿತಿಯಲ್ಲಿ ನಾನು ಅಲ್ಲದೆ ಟೋನಿ,

ಶಿವಕುಮಾರ್, ನಾಗೇಂದ್ರ, ಪಂಕಜ, ಉಮೇಶ್, ನಾಗೇಶ್, ರಾಜಮ್ಮ, ಪರಮೇಶ್, ರಾಜು, ಲೋಕೇಶ್, ರಾಘವೇಂದ್ರ, ಜಯರಾಮ್ ಮತ್ತು ಮಹದೇವ ರವರು ಇದ್ದರು ಎಂದರೆ ಸಾಕ್ಷಿ ಬೇರೆ ಬೇರೆ ಅವಧಿಯಲ್ಲಿ ಪದಾದಿಕಾರಿಯಾಗಿದ್ದರು ಎನ್ನುತ್ತಾರೆ. ಆಡಳಿತ ವರ್ಗದವರು ಏನೇ ಸಮಸ್ಯೆಗಳು ಇದ್ದರು ಈ ಸಮಿತಿಯನ್ನು ಒಪ್ಪಿಕೊಂಡು ಅವರ ಜೊತೆ ಚರ್ಚೆ ನಡೆಸುತ್ತಿದ್ದರು ಎಂದರೆ ಹೌದು. ಆದ್ದರಿಂದ ಆಡಳಿತ ವರ್ಗ ಹಾಗೂ ಕೆಲಸಗಾರರ ನಡುವೆ ಸಂಬಂಧ ಚೆನ್ನಾಗಿ ಇದ್ದದರಿಂದ ಯಾವುದೇ ವಿವಾದ ಉಂಟಾಗಿರಲಿಲ್ಲ ಎಂದರೆ ಸರಿಯಲ್ಲ.

ಸಂಸ್ಥೆಯಲ್ಲಿ ಯಾವುದೇ ಕಾರ್ಮಿಕ ವಿವಾದಗಳು ಇರಲಿಲ್ಲ. ಕಾರ್ಮಿಕ ಕ್ಷೇಮಾಭಿವೃದ್ಧಿ ಸಮಿತಿಯು ಬೇರೆ ಯಾವುದೇ ಸಂಘದ ಜೊತೆ ಸಂಯೋಜನೆಗೊಂಡಿರಲಿಲ್ಲ ಎಂದರೆ ಸರಿ. 2016 ನೇ ಇಸವಿಯಲ್ಲಿ ಸದರಿ ಕ್ಷೇಮಾಭಿವೃದ್ಧಿ ಸಮಿತಿಯವರು ಆಡಳಿತ ವರ್ಗದವರ ಜೊತೆ ಮಾತನಾಡಿ ದೀರ್ಘಕಾಲದ ವೇತನ ಒಡಂಬಡಿಕೆ ಮಾಡಿಕೊಂಡಿದ್ದರು ಎಂದರೆ ಸರಿ. ಸದರಿ ಒಡಂಬಡಿಕೆಯು 3 ವರ್ಷದ ಅವಧಿಗೆ ಆಗಿತ್ತು ಎಂದರೆ ಸರಿ. ಸದರಿ ಕ್ಷೇಮಾಭಿವೃದ್ಧಿ ಸಂಘ ಹಾಗೂ ಆಡಳಿತ ವರ್ಗದ ನಡುವೆ ಸಂಬಂಧ ಇನ್ನು ಗಟ್ಟಿಯಾಗಿತ್ತು ಎಂದರೆ ಸರಿ. ಅದಾದನಂತರ 2019 ನೇ ಇಸವಿಯಲ್ಲಿ ಕ್ಷೇಮಾಭಿವೃದ್ಧಿ ಸಂಘದವರು ಬೇಡಿಕೆ ಪಟ್ಟಿ ಕೊಟ್ಟಿದ್ದು, ದೀರ್ಘಕಾಲದ ವೇತನ ಒಡಂಬಡಿಕೆ ಆಗಿತ್ತು ಎಂದರೆ ಸರಿ. ಸದರಿ ಒಡಂಬಡಿಕೆ ಆದಾಗ ನಾನು ಸಹಾ ಕ್ಷೇಮಾಭಿವೃದ್ಧಿ ಸಂಘದ ಪದಾದಿಕಾರಿ ಆಗಿದ್ದೆ ಎಂದರೆ ಸರಿ. ನಾನು ಈ ರೀತಿ ಆಡಳಿತ ವರ್ಗದವರ ಜೊತೆ 3 ಒಡಂಬಡಿಕೆ ಮಾಡಿಕೊಂಡಿದ್ದೆ, ಆ ಎಲ್ಲಾ ಸಮಯದಲ್ಲಿ ಆಡಳಿತ ವರ್ಗದವರ ಜೊತೆ ನಮ್ಮ ಸಂಬಂಧ ಪ್ರಭಲವಾಗಿತ್ತು ಎಂದರೆ ಸರಿ.

ನಾನು ಪದಾದಿಕಾರಿಗಳು ಬೇರೆ ಕಾರ್ಮಿಕರಿಗೆ ಸಹಾಯ ಮಾಡುತ್ತಿದ್ದ ಕಾರಣ ನಮ್ಮ ಘನತೆ ಹೆಚ್ಚಾಗಿತ್ತು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸಿ ಟೋನಿ ಮತ್ತು ಶಿವು ಎನ್ನುವವರ ಘನತೆ ಕಡಿಮೆ ಆಗಿತ್ತು ಎನ್ನುತ್ತಾರೆ. ಇವತ್ತಿಗೂ ಸಹಾ ಸದರಿ ಟೋನಿ ಮತ್ತು ಶಿವು ರವರು ನಮ್ಮ ಕ್ಷೇಮಾವೃಧಿ ಸಂಘದಲ್ಲಿ ಇರುತ್ತಾರೆ ಎಂದರೆ ಸರಿ. ಸದರಿ ಟೋನಿ ಮತ್ತು ಶಿವು ರವರ ಘನತೆ ಯಾವತ್ತು ಕಡಿಮೆ ಆಗಿಲ್ಲ, ಅವರ ಘನತೆ ಹೆಚ್ಚಾಗಿತ್ತು ಎಂದರೆ ಸರಿಯಲ್ಲ. ಸದರಿ ಟೋನಿ ಮತ್ತು ಶಿವು ರವರ ನಾಯಕತ್ವದಲ್ಲಿ 4 ನೇ ಒಡಂಬಡಿಕೆಯನ್ನು ಕೂಡ ಆಡಳಿತ ವರ್ಗದವರು ಮಾಡಿಕೊಂಡಿದ್ದರು ಎಂದರೆ ಸರಿ. 2 ನೇ ಪಕ್ಷಗಾರರ ಸಂಸ್ಥೆಯ ಮೊತ್ತೊಂದು ಘಟಕ ಶಂಶಾಬಾದ್ ನಲ್ಲಿ ಇರುತ್ತದೆ ಎಂದರೆ ಸರಿ. ಸದರಿ ಶಂಶಾಬಾದ್ ಘಟಕ ಮೊದಲು ಪ್ರಾರಂಭವಾಗಿ ನಂತರ ಮೈಸೂರು ಘಟಕವನ್ನು takeover ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಶಂಶಾಬಾದ್ ಘಟಕ ಮೈಸೂರಿನ ಘಟಕಕಿಂತ ದೊಡ್ಡದಾಗಿರುತ್ತದೆ ಎಂದರೆ ಸರಿ. ನಾವುಗಳು Rungson’s ಸಂಸ್ಥೆಯ ಆಡಳಿತ ವರ್ಗದವರ ಜೊತೆ ಮಾತನಾಡಿ ಕಾರ್ಮಿಕರ ಪ್ರತಿನಿಧಿಗಳು ಸ್ಥಾಯಿಯ ಆದೇಶವನ್ನು ಧೃಡಿಕರಿಸಿಕೊಂಡಿದ್ದರು ಎಂದರೆ ಸರಿಯಲ್ಲ. ನನಗೆ ಸದರಿ ವಿಚಾರ ಗೊತ್ತಿಲ್ಲ ಕಾರ್ಮಿಕ ಸಂಘದ ಪ್ರತಿನಿಧಿಗಳು ಆಡಳಿತ ವರ್ಗದವರ ಜೊತೆ ಸದರಿ ಸ್ಥಾಯಿ ಆದೇಶವನ್ನು ಧೃಡಿಕರಿಸಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ತದನಂತರ Rungson’s ಸಂಸ್ಥೆಯ ಹೆಸರನ್ನು ತೆಗೆದು Cyient DLM ಎಂಬ ಹೆಸರನ್ನು ತಿದ್ದುಪಡಿ ಮಾಡಿಕೊಂಡಿದ್ದರು ಎಂದರೆ ಹೌದು. ಆಗ ನಾನು ಸಹಾ ಸಮಿತಿಯ ಸದಸ್ಯನಾಗಿದ್ದೆ ಎಂದರೆ ಹೌದು.

ನಾನು ನನ್ನ ಪ್ರಮಾಣ ಪತ್ರದಲ್ಲಿ ವಿಚಾರಣೆಯನ್ನು ನನ್ನ ಪರವಾಗಿ ಹಾಗೂ ಉಳಿದ 5 ಜನರ ಪರವಾಗಿ ನುಡಿಯುತ್ತಿದ್ದೇನೆ ಎಂದು ತಿಳಿಸಿರುತ್ತೇನೆ ಎಂದರೆ ಸರಿ.

**ಈ ಹಂತದಲ್ಲಿ 2 ನೇ ಪಕ್ಷಗಾರರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**